

Chandana Kannada Sangha

ನಮ್ಮೂರ ಸುದ್ದಿ

BRINGING KARNATAKA TO KANSAS

https://www.ckskc.org

2026 Q1 & Q2 Newsletter

Table of

Contents

Leadership's Harmony.....1

BOT's Mission and Vision - 2026.....2

Upcoming events.....3

Ugadi celebrations.....4

Hosathodaku.....5

Blood Drive.....6

Sports Day.....7

The StepUp Challenge.....8

Rise and Shine.....9

Experiences speak strong.....12

Sourabha award.....13

SKS Annual day.....14

The History and Cultural Heritage of Karnataka.....16

CKS Gratifications 19

Kids Drawings.....20

Proud Sponsors.....22

Thank you.....30

Leadership's Harmony

As we look ahead in 2026, the executive committee is deeply inspired by the dedication of our team and the impact we will have collectively. We firmly believe that by strengthening our collaborative efforts with partners and the wider community, while remaining transparent in our operations and maintaining fiscal responsibility, we can reach new heights in fulfilling our mission. With the BOT and our steadfast community by our side, we are confident in the triumphs we'll share as we move forward together.



BOT's Mission and Vision - 2026

As the Board of Directors of Namma Chandana Kannada Sangha – Kansas City, it is a privilege to serve this vibrant and growing community. Our role is to offer strategic direction, ensure good governance, and support our Executive Committee in executing programs that reflect the spirit of Kannadambe — our beloved Kannada language and culture.

Our vision is to foster a strong, united, and culturally rich community that honors our roots while embracing the future. We believe in celebrating samskruti (culture), nurturing sambandhagalu (relationships), and inspiring the next generation to stay connected to Namma Kannada naadu — our homeland through language, art, tradition, and togetherness.

With everyone's support, we aim to create a welcoming space where every Kannada-speaking family feels at home, and every child finds pride in their identity.

Let us continue to walk this path together — with unity, pride, and the essence of Kannada in our hearts.

UPCOMING EVENTS

Seva Diwali

Deepavali & Rajyotsava

Harvesters event

Please visit for latest upcoming events
https://www.ckskc.org/upcoming-events

Ugadi celebrations

ವರ್ಷದ ಮೊದಲನೇ ಹಬ್ಬ, ಕರ್ನಾಟಕದ ಸಂಸ್ಕೃತಿಯಲ್ಲಿ ಯುಗಗಳಿಂದ ನಡೆದುಕೊಂಡು ಬಂದಿರುವ ಯುಗಾದಿ ಹಬ್ಬದ ವಿಶೇಷಗಳು ಎಲ್ಲರಿಗೂ ತಿಳಿದೇ ಇದೇ. ಕಾನ್ಸಸ್ ರಾಜ್ಯದಲ್ಲಿ ಓವರ್ಲಾಂಡ್ ಪಾರ್ಕ್ ಉಪನಗರದಲ್ಲಿನ ಚಂದನ ಕನ್ನಡ ಸಂಘ ಪ್ರತಿ ವರ್ಷ ಕರ್ನಾಟಕದ ಸಂಸ್ಕೃತಿಯನ್ನು ಇಪ್ಪತ್ತಾರು ವರ್ಷಗಳಿಂದ ನಡೆಸುಕೊಂಡು ಬರುತ್ತಿದೆ.

ಚೈತ್ರ ಮಾಸದ ಪಾಡ್ಯಮಿ ತಿಥಿಯಂದು ಯುಗಾದಿ ಹಬ್ಬದ ಆಚರಣೆ ಮಾಡುತ್ತಾ ಬಂದಿರುವೆವು. ಕರ್ನಾಟಕದಲ್ಲಿ ಮನೆ ಮನೆಯಲ್ಲು ಹಬ್ಬದ ಸಡಗರ ಅತ್ಯಂತ ವೈಭವವಾಗಿ ಕಂಡು ಬರುತ್ತದೇ. ದೇಶಾಂತರದಲ್ಲಿ ಅದೇ ಸಡಗರವನ್ನು ಕನ್ನಡಿಗರಿಗೆ ನೀಡಬೇಕೆಂಬ ಉತ್ಸಾಹದಿಂದ ಚಂದನ ಕನ್ನಡ ಸಂಘದ ಅಧ್ಯಕ್ಷರು ಹಾಗು ತಂಡವು ಪ್ರಯತ್ನಿಸುತ್ತಿದೆ.

ಯುಗಾದಿಯ ಶುಭಾರಂಭವನ್ನು ಕನ್ನಡ ಸಂಘದ ಸದಸ್ಯರೊಂದಿಗೆ ಸಂಭ್ರಮಿಸಲು ಈ ವರ್ಷ ಏಪ್ರಲ್ 29 ರಂದು ಅದ್ದೂರಿಯಾಗಿ ಆಚರಿಸಿದ್ದೇವೆ. ಆಚರಿಬೇಕಾದ ಪದ್ಧತಿಗಳನ್ನು ಅನುಸರಿಸಿ ಕಾರ್ಯಕ್ರಮ, ಮನೋರಂಜನ ಕಾರ್ಯಕ್ರಮಗಳು ಹಾಗು ಬಾಳೇದೆಲೆ ಊಟ ಅದ್ಭುತವಾದ ಪ್ರಾರಂಭದೊಂದಿಗೆ ನಮ್ಮ ಸೀ.ಕೇ.ಯಸ್ಸಿನ ಹೊಸ ವರ್ಷ ಶುರೂ ಆಯಿತು. ಕಾರ್ಯಕ್ರಮಕ್ಕೆ ಬಂದ ಹಣ್ಣುಮಕ್ಕಳಿಗೆ ಕುಂಕುಮ ತಾಂಬೂಲಗಳೊಂದಿಗೆ ಅಭಿನಂದಿಸಿ ಹಬ್ಬದ ಆನಂದವನ್ನು ಹಂಚಲಾಗಿದೆ. ಯುಗಾದಿ ಹಬ್ಬದ ಶುಭಚಿಂತನೆಗಳು ನಮ್ಮೆಲ್ಲರ ಜೀವನದಲ್ಲು ಅಮೋಘವಾದ ಅಭಿವೃದ್ಧಿ ತರುತ್ತಿರಲೆಂದು ಹಾರೈಸುತ್ತಾ ವರ್ಷಾ ವರ್ಷಾ ಮತ್ತಷ್ಟು ಅದ್ದೂರಿಯಾಗಿ ಎಲ್ಲರೊಂದಿಗೆ ಹಬ್ಬವನ್ನು ಆಚರಿಸೋಣ. ಸೀಕೇಯಸ್ ಸದಸ್ಯರೆಲ್ಲ ಸೇರಿ ಹಬ್ಬಗಳನ್ನು ಸೇರಿ ಸಂಭ್ರಮಿಸುವುದರಿಂದ ಮಹದಾನಂದವಾಗಿದೆ.













Hosathodaku

ಹೊಸತೊಡಕು ಯುಗಾದಿ ಹಬ್ಬದ ಮಾರನೇ ದಿನ ಕುಟುಂಬದವರೊಟ್ಟಿಗೆ ಬಾಂಧವರೊಂದಿಗೆ ಆಚರಿಸಲಾಗುತ್ತದೆ. ನಮ್ಮ ಚಂದನ ಕನ್ನಡ ಸಂಘದಲ್ಲಿ ಯುಗಾದಿಯ ಆಚರಣೆ ಅತ್ಯಂತ ವೈಭವದಿಂದ ನಡೆಸಲಾಗುತ್ತದೆ. ಇದೀಗ ಎರಡು ವರ್ಷಗಳಿಂದ ಹೊಸತೊಡಕು ಸಂಘದ ಸದಸ್ಯರೊಂದಿಗೆ ಉದ್ಯಾನದಲ್ಲಿ
ರುಚಿ ರುಚಿಯಾದ ಅಡುಗೆಗಳು ಮಾಡಿ ಅನೇಕರ ಸಹಾಯದಿಂದ ಸವಿರುಚಿಯನ್ನು ಸವಿಯುತ್ತ ನಲೆಯಲಾಗುತ್ತದೇ.

ಬಹಳ ಶಾಖಾಹಾರಿಗಳಿಗೆ ಹೊಸತೊಡಕಲ್ಲಿ ನಮಗೇನು ದೊರೆಯಬಹುದೆಂದು ತಿಳಿದು ಭ್ರಮೆಪಟ್ಟು ಭಾಗವಹಿಸಲಿಲ್ಲ. ಹೊಸತೊಡಕು ಮಾಂಸಾಹಾರಕ್ಕೇ ಸೀಮಿತ ಮಾಡದೇ ಶಾಖಾಹಾರಿಗಳಿಗೂ ಉದ್ಯಾನದ ಊಟವಿರಲೆಂದು ಎರಡು ಬಗೆ ಊಟವನ್ನು ಕಾರ್ಯಕರ್ತರು ಮಾಡಿದರು. ಸಿಹಿಗಳನ್ನು ಭಾರತದಿಂದ ತರಿಸಿ ಬಡಿಸಿದರು ಸೀ.ಕೆ.ಎಸ್ಸಿನ ಈ ವರ್ಷದ ಅಧಿಕಾರವರ್ಗವು. ನೂರಕ್ಕೆ ಮೇಲ್ಪಟ್ಟು ಸದಸ್ಯ ಸಮೂಹ ಸೇರಿದ್ದು ಬಹಳ ಸಂತೋಷಕರ ವಿಷಯ. ಹೀಗೇ ಸೀ.ಕೆ.ಎಸ್. ವರ್ಷಾವರ್ಷಾ ಉದ್ದಾರದ ಮೆಟ್ಟಲು ಹತ್ತಲೆಂದು ಆಶಿಸುತ್ತೇವೆ.

















Blood drive

Donating blood is the pure donation one can do. In the month of August, CKS collaborates with Redcross and organizes a blood drive initiative every year for four years. It gives immense contentment to save lives. Each drop might be worth a life. Our CKS members' families and friends come forward to donate blood with a warm heart. Youth committee of CKS would maintain the list and help to execute the mission is well appreciated. In the process the young generation is learning the significance of drive. This very action is a give back to the community. We are grateful for every single donor who volunteered to donate blood for the needy and support CKS's efforts to save lives.







Sports day

The great enthusiasm and passion for sports made sports day more than successful. The day was a lively day for CKS families at Heritage park with various sport activities. Running races , kids' soccer, volleyball and women's throwball, every game applauded the players. Unlimited joy of the participants cheered the families on Sports day elevating the CKS family togetherness and team work

At Heritage Park, families enjoyed a lively Sports Day with running races, kids' soccer, mixed volleyball, and women's throw ball. The day was filled with energy, cheering, teamwork,

From pickle ball courts to open fields, the Sports team's exclusive spirit of staying fit, having fun and bonding well was pristinely seen. We thank everyone who participated, cheered, and volunteered for making the events memorable.















The StepUp Challenge:Community Fitness in Motion

This year sports team's super hit initiative is StepUp Challenge, an inspiration for daily walking that instantly took the favorite spot to walking members. The challenge is categorised and awarded to men and women winners each month for six months which is motivating more than eighty walkers positively.

Remarkable achievements were recorded each month. Per day Steps bar is growing high with competitive vigor. Challenge has given a different perspective to the walkers to embrace exercise in their busy daily routines.



Rise and Shine

CKS's consistent performance during thick and thin had been the highlighting element of the unity and togetherness. Big pat on the back for the team and leader board to execute the schedule with a strategy.

The very initiation of bringing Kannadigas together itself has crowned its members by providing a rendezvous that emulates folks to feel the harmony. Twenty six years of journey has seen many ebbs and flows. Appreciate the effort that is put in to keep growing steadily with the support of worthwhile volunteers and esteemed members. Beautifully strategized the occasions that empower culture and embracing people with the glorious warmth of home, back in the motherland.

Circumstances are unpredictable. The world faces a lockdown in 2020. A fearful year that disrupted global peace. Chandana Kannada sangha instead of tumbling or crumbling has risen to the new dynamic ways that can persevere the situations and entertain its members ensuring togetherness while building confidence to remind the black clouds will pass and there are shiny days ahead that galvanise the future. Under the president ship and vice president ship of Sri Satish Khot and Shrimati Kavitha Reddy, CKS executes an online version of Deepavali celebrations in a discreeting way for the discreted Kannadigas of those days. Immense interest and passion of the cultural team aligned with the leadership board's vision and mission, that liaisoned the members' enthusiasm. As a cultural team stalwarts of CKS Sri Sachin and Sri Muralidhar Bhat collected videos of dances and singing from the enthusiastic participants, with whose cooperation the online event went successful. Very few from the crew met at someone's basement to show the program live. Streaming and coordinating were needed with immense dedication while staying safe from the deadly virus. Pandemic taught world life online with six feet distance from each other. Verve in CKS members and organisers uplifted the underlying moment to up see the event's exhilaration through live videos. It was an amazing achievement for the organisers, team and the participants. Not only the programs were streamlined but there was a special celebrity guest Sudha bargur's online live standup comedy was organised to make the program more entertaining. This was a wonderful opportunity for our CKS members to smile ear to ear in that long isolation.

Later the pandemic year still the similar fear in people's minds lingered. The same leadership board continued for the following year. The events were organised at low key with minimum fifty people gatherings. Tough time passed and the CKS members' vigor stemmed up from being quarantined. Slowly the liveliness strengthened with the time.

CKS has had amazingly passionate leadership teams on board every year since then. It wasn't easy to bring back two hundred fifty families together to celebrate Karnataka, Kannada and culture after the pestilence. The heritage of Karnataka has always been a strong influence on Kannadigas which brought the spright full vibes live like a springtime. Presidents and whole teams trying their best to give something new to our members that can enchant the community with joyous celebrations and festival vibrations.

The team spirit and the community's resilience started to draw the attention of overland park new bees. The membership number grew which was a significant boost to CKS's overall performance. Under the presidency and vice presidency of Arjun Ramesh and Sharath new steps of entertainment were added to enhance the event's vitality. Upcoming local artists called beats gurus were invited to perform live on the CKS stage. That set the CKS platform's bar high. The absolutely incredible performance by the band made members participate more in the CKS events and occasions.

CKS reached its milestone of 25 years. The silver jubilee of CKS was celebrated as Utsava. The leader board's and team's extraordinary efforts made the Utsava year memorable in the CKS's timeline. President and vice president Chetan Giri, Usha Kerakatty and their team made remarkable ecstasy in the hearts of CKS members and also extended warm friendship with other communities in the city like KAKC, TAGKC.

The program list included reverences to the all presidents and cheerful volunteers who worked hard to build the community and community's trust. This aesthetically pleased the hearts of many CKS pillars. The book Utsava was published which captured every essential element to be expressed to the reader's veracity. An epic moment of pride is circulated amongst the powerful and authentic members of CKS. The community's growth is enormously impressive with the celebrations reaching enshrined at the peak of the scale. A newsletter for CKS was actively promoted. All kannada learning students had an opportunity to share their stories or essays to encourage their interest in Kannada. CKS events will be enunciated in the newsletters that elicit the happenings and highlights.

The community's spirit touched the sky in its Utsava year, the silver jubilee celebrations. It wasn't easy to please the members after such high spirited celebrations. Arjun Nanje Gowda and Sunil Reddy addressed the leaderships' responsibilities extravagantly in their respective president and vice president roles. New ideas were implemented which enriched the members' energies to the next level. New fun activities were introduced to members in their term. Camping was the super hit experience most of the member families had enjoyed. Hosathodaku after the Ugadi event was another addition where the food was cooked together at the park in the open area. The whole day everyone was involved in preparations along with cheerful talks, the day went palpably.

Experiences speak strong

Sri Chetan Giri, President of CKS year 2024 shares his valuable experience

Utsava 2024 will always hold a very special place in my heart, not just as the year I had the privilege of serving as CKS President, but as a time when our community came together in a truly meaningful way. My hope from the beginning was to create an inclusive space where everyone felt welcomed to participate, and seeing people unite to perform, volunteer, and celebrate our culture was deeply fulfilling. Behind every celebration were countless hours, shared challenges, and dedicated individuals who stepped forward simply because they cared. I am deeply grateful to our EC, BOT, volunteers, sponsors, performers, and every CKS family who believed in this vision. More than anything, I will cherish the relationships and memories we built, because Utsava 2024 was never about one person or one team—it truly belonged to all of us.

Sourabha award

CKS has been awarding a special award called “Sourabha” to its very own valuable member or members who exemplifies the CKS’s commitment and dedication for the community’s best welfare. Let’s wait until the surprise winner or winners are unveiled.

ನೋಡಿ ಮ್ಯಾಡಂ, ನಾವು ಇರೋದೇ ಹೀಗೆ!

ಸೂರ್ಯಕಾಂತಿ ಕನ್ನಡ ಶಾಲೆಯ ವಾರ್ಷಿಕೋತ್ಸವದ ಒಂದು ಸಾಹಸಕಥೆ

ಸೂರ್ಯಕಾಂತಿ ಕನ್ನಡ ಶಾಲೆಯ ಶಿಕ್ಷಕರ ವರ್ಷಾಂತ್ಯದ ಸಭೆ ಜೂನ್ 24, 2026ರಂದು ನಡೆಯಿತು. ಆ ಸಭೆಯಲ್ಲಿ ನಾನು ಒಂದು "ಚಿಕ್ಕ" ಪ್ರಸ್ತಾಪ ಇಟ್ಟೆ—"ಈ ವರ್ಷ ಶಾಲೆಯ ವಾರ್ಷಿಕೋತ್ಸವ ಮಾಡೋಣ!" ಕೆಲವು ಕ್ಷಣ ಮೌನ. ಒಬ್ಬರು ತಲೆ ಆಡಿಸಿದರು, ಮತ್ತೊಬ್ಬರು "ಹೂಂ..." ಎಂದರು. ಇನ್ನೊಬ್ಬರು ನೀರಿನ ಬಾಟಲಿ ಕುಡಿಯುವುದರಲ್ಲಿ ತಲ್ಲೀನರಾಗಿದ್ದರು. ನನಗಂತೂ, "ಇವತ್ತು ನಾನು ಯಾವ ಸಾಹಸಕ್ಕೆ ಕೈ ಹಾಕಿದೆ?" ಅನ್ನಿಸಿತು!

ಆದರೂ ಮುಂದುವರಿಸಿದೆ. "ಮಕ್ಕಳಿಂದ ಕನ್ನಡ ಹಾಡು, ಹಾಸ್ಯಪ್ರಹಸನ, ನಾಟಕ ಮಾಡಿಸೋಣ. ಬಾಲಿವುಡ್-ಕಾಲಿವುಡ್ ಹಾಡುಗಳಿಗೆ ಒಂದೇ ರೀತಿಯ ಮಿನುಗುವ ಬಟ್ಟೆ ಹಾಕಿಸಿ ಡ್ಯಾನ್ಸ್ ಮಾಡಿಸುವುದು ಈ ಬಾರಿ ಬೇಡ."

ಕೆಲವರು ಪರಸ್ಪರ ಮುಖ ನೋಡಿಕೊಂಡರು. ಬಹುಶಃ, "ಈ ಆಂಟಿ ಇನ್ನೂ ಹಳೆಯ ಕಾಲದಲ್ಲೇ ಇದ್ದಾರೋ!" ಎಂದುಕೊಂಡಿರಬಹುದು. ಆದರೆ ಎಲ್ಲರೂ ನಗುಮುಖದಿಂದ, "ಮಾಡೋಣ ಮ್ಯಾಡಂ!" ಎಂದರು. ಹೀಗೆ ಸಾಹಸಕ್ಕೆ ಮೊದಲ ಹೆಜ್ಜೆ ಬಿತ್ತು.

ಸಾಂಸ್ಕೃತಿಕ ಸಮಿತಿ ರಚನೆಯಾಯಿತು. ಶಿಕ್ಷಕರು ಮತ್ತು ಪೋಷಕರಿಂದ ಕಾರ್ಯಕ್ರಮಗಳನ್ನು ಸಂಗ್ರಹಿಸಿದ ಕೆಲವೇ ದಿನಗಳಲ್ಲಿ ಹದಿನೆಂಟು ಕಾರ್ಯಕ್ರಮಗಳ ಪಟ್ಟಿ ಸಿದ್ಧವಾಯಿತು!

ಟಿಕೆಟ್ ಇಡೋಣವೇ ಎಂಬ ಚರ್ಚೆಗೆ, "ಬೇಡ ಮ್ಯಾಡಂ, ನಾವು ಅಡ್ಜಸ್ಟ್ ಮಾಡಿಕೊಳ್ಳೋಣ," ಎಂಬ ಉತ್ತರ. ಊಟದ ಜವಾಬ್ದಾರಿಯನ್ನೂ ಚಂದನ ಕನ್ನಡ ಸಂಘದ ಸ್ನೇಹಿತರು ವಹಿಸಿಕೊಂಡರು—ಮಕ್ಕಳಿಗೆ ಪಿಜ್ಜಾ, ಎಲ್ಲರಿಗೂ ಸಮೋಸಾ ಮತ್ತು ನೀರು!

ಪೋಷಕರಿಗೆ ಚಿತ್ರಾನ್ನ, ಮೊಸರನ್ನ, ಜಾಮೂನು ಎಂದು ತೀರ್ಮಾನವಾಗುತ್ತಿದ್ದಂತೆ ಅಡುಗೆ ಸಮಿತಿಯೂ ಸಿದ್ಧ. "ಚಿತ್ರಾನ್ನ ನಾವು," "ಮೊಸರನ್ನ ನಮ್ಮದು," ಎಂದು ಫೋನ್ ಕರೆಗಳು ಬರತೊಡಗಿದವು. ಬಾಕ್ಸ್‌ಗೆ ಊಟ ತುಂಬುವ ಕೆಲಸದ ಮಾತು ಬಂದಾಗ, "ನಮ್ಮ ಹಸ್ಬೆಂಡ್ ಸಹಾಯ ಮಾಡ್ತಾರೆ," "ನನ್ನ ತಂಗಿಯನ್ನೂ ಕರೆತರುತ್ತೇನೆ," "ನಾನು ಬೇಗ ಬರುತ್ತೇನೆ," ಎಂಬ ಉತ್ತರಗಳು.

ಸಮಸ್ಯೆಗಳ ಬಗ್ಗೆ ಯೋಚಿಸುವಷ್ಟರಲ್ಲಿ ಪರಿಹಾರಗಳು ಬಾಗಿಲು ತಟ್ಟುತ್ತಿದ್ದವು!

ಆಗಸ್ಟ್ 1ರಂದು ಕಾರ್ಯಕ್ರಮದ ದಿನ ಸಭಾಂಗಣಕ್ಕೆ ಕಾಲಿಟ್ಟಾಗ ಹಾಲ್ ಸಂಪೂರ್ಣ ಖಾಲಿ. ಕುರ್ಚಿಗಳೆಲ್ಲ ಗೋಡೆಯ ಪಕ್ಕದಲ್ಲಿ ಜೋಡಿಸಲ್ಪಟ್ಟಿದ್ದವು. ಆದರೆ ಒಬ್ಬರು ಸುಮ್ಮನೆ ಒಂದು ಕುರ್ಚಿ ಎತ್ತಿದರು. ಅವರನ್ನು ನೋಡಿ ಮತ್ತೊಬ್ಬರು ಸೇರಿದರು. ಹೀಗೆ ನೋಡ ನೋಡುತ್ತಿದ್ದಂತೆಯೇ ಎಲ್ಲರೂ ಕುರ್ಚಿ ಜೋಡಿಸಲು ತೊಡಗಿದರು. ಹತ್ತು ನಿಮಿಷಗಳಲ್ಲಿ ಖಾಲಿ ಹಾಲ್ ಕಾರ್ಯಕ್ರಮಕ್ಕೆ ಸಿದ್ಧ!

ಇದು "ಯಾರಾದರೂ ಮಾಡುತ್ತಾರೆ" ಎನ್ನುವ ಮನೋಭಾವವಲ್ಲ; "ನಾನೇ ಮಾಡ್ತೀನಿ ಬಿಡಿ!" ಎನ್ನುವ ಕನ್ನಡಿಗರ ಮನೋಭಾವ!

ಸೌಂಡ್ ಸಿಸ್ಟಮ್ ಕಥೆಯೂ ಅಷ್ಟೇ. ವೇದಿಕೆಯಲ್ಲಿದ್ದ ಹಳೆಯ ಸಿಸ್ಟಮ್‌ಗೆ ಮನೆಯಲ್ಲಿದ್ದ ಆಧುನಿಕ ಸಾಧನಗಳನ್ನು ತಂದು ಜೋಡಿಸಲಾಯಿತು. ಅಜ್ಜಿಗೆ ಸ್ಮಾರ್ಟ್ ವಾಚ್ ಕಟ್ಟಿದಂತಿದ್ದರೂ, ಕೊನೆಗೆ ಸೌಂಡ್ ಚೆನ್ನಾಗಿ ಕೆಲಸ ಮಾಡಿತು!

ಆಗಲೇ ಒಂದು ವಿಷಯ ಸ್ಪಷ್ಟವಾಯಿತು—ಈ ಕಾರ್ಯಕ್ರಮದ ಯಶಸ್ಸಿಗೆ ದೊಡ್ಡ ಬಜೆಟ್ ಅಥವಾ ವೃತ್ತಿಪರ ಈವೆಂಟ್ ಕಂಪನಿ ಕಾರಣವಲ್ಲ. ಒಬ್ಬರು "ನಾನು ಮಾಡ್ತೀನಿ" ಎಂದಾಗ ಮತ್ತೊಬ್ಬರು "ನಾವೂ ಇದ್ದೇವೆ" ಎಂದು ಕೈಜೋಡಿಸಿದ ಸಹಕಾರದ ಮನೋಭಾವವೇ ಕಾರಣ.

ಮಕ್ಕಳ ಉತ್ಸಾಹದಿಂದ ಕಾರ್ಯಕ್ರಮ ಆರಂಭವಾಯಿತು. "ಹಚ್ಚೇವು ಕನ್ನಡದ ದೀಪ" ಹಾಡಿನೊಂದಿಗೆ ಶುರುವಾದ ಕಾರ್ಯಕ್ರಮದಲ್ಲಿ ಡಾ. ರಾಜ್‌ಕುಮಾರ್, "ತೋಟಕೆ ಹೋದ ತಿಮ್ಮ", "ಅಣ್ಣನು ಮಾಡಿದ ಗಾಳಿಪಟ", "ಗುಡಿಯಲಿರುವ ಶಿಲೆಗಳೆಲ್ಲ ದೇವರಂತೆ", "ಕಣ್ಣಿಗೆ ಕಾಣೋ ದೇವರು ತಾನೇ ಅಮ್ಮ", "ಕನ್ನಡಕ್ಕೆ ಹೋರಾಡು ಕಂದ", "ಜಯತಿ ಜಯತಿ ಭಾರತ ಮಾತೆ" ಮುಂತಾದ ಹಾಡುಗಳು ಮನಸೂರೆಗೊಂಡವು.

ಕಥೆ ಹೇಳುವ ಪುಟಾಣಿಗಳು ಸಿಂಹ-ಮೊಲದ ಕಥೆಯ ಮೂಲಕ "ಜಂಬ ಒಳ್ಳೆಯದಲ್ಲ" ಎಂಬ ಪಾಠ ಕಲಿಸಿದರೆ, ಉತ್ತರ ಕನ್ನಡ ಶೈಲಿಯ ಕಾಗೆ-ನರಿ ಕಥೆ "ಹೊಗಳುವ ಭಟ್ಟರಿಗೆ ಮರಳಾಗಬೇಡಿ!" ಎಂದು ಎಚ್ಚರಿಸಿತು.

ಬೆಂಗಳೂರು ವಿಳಾಸ ಹುಡುಕುವವರ ಗೋಳನ್ನು ಹಾಸ್ಯವಾಗಿ ಚಿತ್ರಿಸಿದ ಕಾರ್ಯಕ್ರಮ ಸಭಾಂಗಣವನ್ನು ನಗೆಗಡಲಿನಲ್ಲಿ ತೇಲಿಸಿತು. ಕನ್ನಡ ರಾಜ್ಯೋತ್ಸವದ ಆಡಂಬರವನ್ನು ವ್ಯಂಗ್ಯವಾಗಿ ತೋರಿಸಿದ ನಾಟಕವೂ ನಗಿಸುವುದರ ಜೊತೆಗೆ ಯೋಚಿಸುವಂತೆ ಮಾಡಿತು.

ಆರು-ಏಳು ವರ್ಷದ ಪುಟಾಣಿಗಳ "ಹಸಿರು ಉಸಿರು" ಕಾರ್ಯಕ್ರಮ ಪರಿಸರ ಸಂರಕ್ಷಣೆಯ ಸಂದೇಶ ನೀಡಿತು. ನಂತರ ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮತ್ತು ಲಾರ್ಡ್ ಡಲ್ಹೌಸಿಯ ಪಾತ್ರಗಳ ಮೂಲಕ ಇತಿಹಾಸವೇ ವೇದಿಕೆಯಲ್ಲಿ ಜೀವಂತವಾಯಿತು.

ಮೂವರು ಪುಟಾಣಿ ನಿರೂಪಕರು ಇಡೀ ಕಾರ್ಯಕ್ರಮವನ್ನು ಆತ್ಮವಿಶ್ವಾಸದಿಂದ ಮುನ್ನಡೆಸಿದರು. ನಿಜಕ್ಕೂ—"By the kids, for the kids, and of the kids!"

ಕೊನೆಯದಾಗಿ ಮೂಡಿಬಂದ ಓನಕೆ ಓಬವ್ವ ನಾಟಕ ಎಲ್ಲರ ಮನಸ್ಸನ್ನು ತಟ್ಟಿತು. ಓನಕೆ ಹಿಡಿದು ಕೋಟೆಯನ್ನು ರಕ್ಷಿಸಿದ ಓಬವ್ವನ ಪಾತ್ರವನ್ನು ಪುಟ್ಟ ಬಾಲಕಿ ಅದ್ಭುತವಾಗಿ ಅಭಿನಯಿಸಿದಾಗ, ಹಲವರ ಕಣ್ಣಂಚಿನಲ್ಲಿ ನೀರು ತುಂಬಿತು.

ದೂರದ ನಾಡಿನಲ್ಲಿ ಬೆಳೆದರೂ ಈ ಮಕ್ಕಳು ತಮ್ಮ ಮಾತು, ಹಾಡು ಮತ್ತು ಅಭಿನಯದ ಮೂಲಕ ಕನ್ನಡದ ಕಸ್ತೂರಿಯನ್ನು ಪಸರಿಸಿದರು. ಭಾರತದಲ್ಲಿದ್ದ ಅಜ್ಜ-ಅಜ್ಜಿಯರು ಮತ್ತು ಬಂಧುಗಳು ಆನ್‌ಲೈನ್ ಮೂಲಕ ಕಾರ್ಯಕ್ರಮ ವೀಕ್ಷಿಸಿ ಹೆಮ್ಮೆಪಟ್ಟರು. ಮಕ್ಕಳ ಮುದ್ದಾದ ಕನ್ನಡ ಮತ್ತು ಆತ್ಮವಿಶ್ವಾಸ ಎಲ್ಲರ ಮನ ಗೆದ್ದಿತು.

ಕಾರ್ಯಕ್ರಮ ಮುಗಿಯುವ ಹೊತ್ತಿಗೆ, ಮೊದಲ ಸಭೆಯಲ್ಲಿ ಮನಸ್ಸಿನಲ್ಲಿದ್ದ "ಇದು ಆಗುತ್ತದೆಯೇ?" ಎಂಬ ಪ್ರಶ್ನೆ, "ಇಷ್ಟು ಚೆನ್ನಾಗಿ ಹೇಗೆ ಆಯಿತು?" ಎಂಬ ಆಶ್ಚರ್ಯವಾಗಿ ಬದಲಾಗಿತ್ತು.

ಸೂರ್ಯಕಾಂತಿ ಕನ್ನಡ ಶಾಲೆಯ ಶಿಕ್ಷಕರು, ಮಕ್ಕಳು, ಪೋಷಕರು ಮತ್ತು ಕನ್ನಡದ ಗೆಳೆಯರೆಲ್ಲರೂ ಒಂದಾಗಿ ಕೈಜೋಡಿಸಿದ ರೀತಿ ನೋಡಿದಾಗ, ಎಲ್ಲರೂ ಒಂದೇ ಮಾತು ಹೇಳಿದಂತಾಯಿತು—

"ನೋಡಿ ಮ್ಯಾಡಂ, ಕನ್ನಡಿಗರು ಇರೋದೇ ಹೀಗೆ! ಎಲ್ಲರೂ ನಮ್ಮವರೇ. ಕೈಜೋಡಿಸೋದೇ ನಮ್ಮ ಕೆಲಸ. ಯಾರಿಗೆ ಯಾವಾಗ ಸಹಾಯ ಬೇಕಾದರೂ, ನಾವಿರುತ್ತೇವೆ. ನೋಡಿ ಮ್ಯಾಡಂ, ನಾವಿರೋದೇ ಹೀಗೆ!"

ಅದೇ ಈ ವಾರ್ಷಿಕೋತ್ಸವದ ನಿಜವಾದ ಯಶಸ್ಸು.
ಕಾರ್ಯಕ್ರಮವನ್ನು ಯೋಜಿಸಿದ್ದು ಕೆಲವರು; ಆದರೆ ಅದನ್ನು ತಮ್ಮದೇ ಕಾರ್ಯಕ್ರಮವೆಂದು ಭಾವಿಸಿ ತಮ್ಮ ಸಮಯ, ಶ್ರಮ, ಪ್ರತಿಭೆ ಮತ್ತು ಪ್ರೀತಿಯನ್ನು ಕೊಟ್ಟು ಯಶಸ್ವಿಗೊಳಿಸಿದ್ದು ಎಲ್ಲರೂ.
ನೋಡಿ ಮ್ಯಾಡಂ, ನಾವು ಇರೋದೇ ಹೀಗೆ!













ಕರ್ನಾಟಕದ ಇತಿಹಾಸ ಹಾಗು ಚಾರಿತ್ರಿಕ ಪರಂಪರೆ

ಕರ್ನಾಟಕದ ಇದಿಹಾಸವನ್ನು ತಿಳಿಯಬೇಕ್ಕಾದ್ದು ನಮ್ಮೆಲ್ಲರ ಕರ್ತವ್ಯ. ಮುಖ್ಯವಾಗಿ ನಮ್ಮ ಪೀಳಿಗೆಗಳಿಗೆ ಇಂತಹಾ ಚರಿತ್ರೆಯನ್ನು ಹೆಮ್ಮೆಯಿಂದ ಹೇಳಬೇಕು.

ರಾಮಾಯಣ ಮಹಾಭಾರತದ ಕಾಲಗಳಿಂದ ಕರ್ನಾಟಕ ರಾಜ್ಯದ ಪ್ರಶಸ್ಥಿ ಉಚ್ಚಸ್ಥರದಲ್ಲಿ ಇತ್ತೆಂದು ನಿರೂಪಿಸುತ್ತದೇ. ಸುಗ್ರೀವನ ಕಿಷ್ಕಿಂದ ರಾಜ್ಯವು ಇಂದಿನ ಹಂಪಿಯಾಗಿತ್ತೆಂದು ಇತಿಹಾಸ ತಿಳಿಸುತ್ತದೆ.

ಮಹಾಭಾರತದಲ್ಲಿ ಕುಂತಲ ಪ್ರದೇಶ ವಿರಾಟ ನಗರ ಹಾನಗಲ್ಲು, ಬನವಾಸಿ ಭಾಗಗಳಲ್ಲಿ ಇತ್ತೆಂದು ಕೆಲವು ಉಲ್ಲೇಖಗಳಲ್ಲಿ ಕಂಡು ಬರುತ್ತದೆ.

ಸುಮಾರು ೨೦೦೦ ವರ್ಷಗಳಕ್ಕಿಂತಲು ಹಿಂದಿನ ಕಾಲದಿಂದ ಇತಿಹಾಸ ಹೊಂದಿದ ಅದ್ಭುತವಾದ ನಾಡು ನಮ್ಮ ಕನ್ನಡ ನಾಡು. ಹಿಂದೆ ಆಳಿದ ಅನೇಕ ಸಾಮ್ರಾರಾಜ್ಯಗಳು ಕರುನಾಡಿನ ಸಂಸ್ಕೃತಿ ಹಾಗು ಹಿರಿಮೆಯೆನ್ನು ಅತ್ಯಂತ ಸುಂದರವಾಗಿ ಬೆಳಸಿ ನಮ್ಮ ಇಂದಿನ ಜನತೆಯವರೆಗೆ ತಲುಪಿಸಿದ್ದಾರೆ. ವೀರರಿಂದ ತುಂಬಿದ ನಮ್ಮಯ ಕರುನಾಡಿನಿಂದ ಉತ್ತರ, ಮಧ್ಯ ಭಾರತಗಳಲ್ಲಿ ನಡೆಯುವ ಸಮರಗಳಲ್ಲಿ ಯೋದ್ಧರಾಗಿ ಭಾಗವಹಿಸುತ್ತಿದ್ದರು.ಒಂದು ಕಾಲದಲ್ಲಿ ಚಿಂದಕ ನಾಗರು, ಕಳಿಂಗದ ಗಂಗರು, ಮಾನ್ಯಖೇಟದ ರಾಷ್ಟ್ರಕೂಟರು ವೆಂಗಿ ಚಾಲುಕ್ಯರು, ದೇವಗಿರಿಯ ಯಾದವ ವಂಶದವರೆಲ್ಲರ ಮೂಲ ಕರ್ನಾಟಕವಾಗಿತ್ತು. ತ್ರೇತಾಯುಗದಲ್ಲಿ, ಅಶೋಕನ ಕಾಲದಲ್ಲಿ, ಶಾತವಾಹನನ ಸಮಯದಲ್ಲು ಸಹ ಕರ್ಣಾಟ ದೇಶ ಮತ್ತು ಕುಂತಲ ರಾಜ್ಯವೆಂದು ಪ್ರಖ್ಯಾತಿಯಾಗಿತ್ತು.

ಅಶೋಕನ ಕಾಲದಲ್ಲಿ ಶಿಲಾಶಾಸನಗಳಲ್ಲಿ ಅಲ್ಲಲ್ಲಿ 'ಇಸಿಲ' ಎನ್ನುವ ಹಳೆಗನ್ನಡದ ಪದವು ಕಂಡು ಬರುತ್ತವೆಯಂದು ಪರಿಶೋಧಕರು ತಿಳಿಸುತ್ತಾರೆ.

ಕದಂಬರು ಮೊಟ್ಟಮೊದಲು ಕನ್ನಡ ರಾಜ್ಯವನ್ನು ಕ್ರೀ.ಶ. 345 ರಿಂದ ಕ್ರೀ.ಶ. 365ರ ವರೆಗೆ ಆಳಿದರು. ವೀರಶರ್ಮರ ಮೊಮ್ಮಗ ಬಹಳ ವರ್ಷಗಳು ರಾಜ್ಯವನ್ನು ಆಳಿದರು. ಅವರ ಮನೆ ಹಿತ್ತಲಿನಲ್ಲಿ ಬೆಳೆದ ಕದಂಬ ಮರದಿಂದ ಅವರ ರಾಜ್ಯಕ್ಕೆ ಆ ಹೆಸರು ಬಂದಿತೆಂದು ಚೆರಿತ್ರೆಯಲ್ಲಿ ಕಂಡುಬರುತ್ತದೆ. ಬ್ರಾಹ್ಮಣರ ಅಗ್ರಹಾರದಲ್ಲಿ ಬೆಳೆದ ಅವರು ಪಲ್ಲವ ಅಧಿಕಾರಿಗಳಾದ ಶಿವಸ್ಕಂದ ವರ್ಮನು ಮಾಡಿದ ಅವಮಾನದಿಂದ ಕ್ಷತ್ರಿಯರಾಗಿ ಮಯೂರವರ್ಮರೆಂದು ಪ್ರಸಿದ್ಧತೆಯನ್ನು ಹೊಂದಿದರು. ಬನವಾಸಿ ಕದಂಬರು ಅನೇಕ ವರ್ಷಗಳ ಕಾಲ ರಾಜ್ಯವನ್ನು ಆಳಿದರು. ಅದೇ ಮೊಟ್ಟ ಮೊದಲ ಸ್ಥಳೀಯ ಸಾಮ್ರಾಜ್ಯವೆಂದು ಉಲ್ಲೇಖಗಳು ತಿಳಿಸುತ್ತವೆ. ಕದಂಬರ ಕಾಲದಲ್ಲಿ ಕನ್ನಡ ಭಾಷೆಗೆ ಬುನಾದಿ ಆಯಿತೆಂದು ತಿಳಿಯಬಹುದು. ಆಡಳಿದ ಭಾಷೆಯಾಗಿ ರಾಜ್ಯದಲ್ಲಿ ಹಳೇಮಿಡಿಯಂಬುವ ಶಿಲಾಶಾಸನದಲ್ಲಿ ಕಂಡುಬಂದಿದೆ. ಅದರ ಮೂಲಕ ಕನ್ನಡವೇ ಆಡಳಿತ ಭಾಷೆಯಂದು ದೃಢವಾಯಿತು.

ಕರ್ನಾಟಕದ ಇತಿಹಾಸ ಹಾಗು ಚಾರಿತ್ರಿಕ ಪರಂಪರೆ

ಆನಂತರ ಕಾಲದಲ್ಲಿ ಗಂಗರು ತಲಕಾಡು ಪ್ರಾಂತವನ್ನು 325 - 999 CE ತನಕ ಆಳಿದರು. ಶ್ರಾವಣಬೆಳಗೋಳದ ಗೋಮಟೇಶ್ವರರನ್ನು ಗಂಗರಿಂದ ನಿರ್ಮಿಸಿಸಲಾಗಿದೆ.

ರಾಜ್ಯದ ಮುಂದುವರಿಕೆ ಬಾದಾಮಿ ಚಾಲುಕ್ಯರಿಂದ 500 – 757 CE ರವರೆಗೆ ನಡೆದಿತು. ಪುಲಕೇಶಿ ಹಾಗು ಪುಲಕೇಶೀ ೨ ಹರ್ಷವರ್ದನನ್ನ ಸೋಲಿಸಿ ಬಹಳಕಾಲ ಆಳಿದರು. ಅವರ ಕಾಲದಲ್ಲಿ ಕಲೆಯನ್ನು ಹಾಗು ವಾಸ್ತುಶಿಲ್ಪಗಳನ್ನು ಅತ್ಯಂತ ಪ್ರಾಭಾವಿಕವಾಗಿ ಇಂದಿನವರೆಗೆ ಪ್ರಮುಖವಾಗಿ ನಿಲ್ಲುವಷ್ಟು ಪ್ರೋತ್ಸಹನೆ, ಸಾಮರ್ಥ್ಯತೆ ತೋರಿದ್ದಾರೆ. ಗುಹೆಗಳ ಒಳಗೆ ಕೆತ್ತನೆಗಳ ಅದ್ಭುತತೆಯನ್ನು ಹೊಗಳಲು ಪದ ನ್ಯೂನವಾಗುವಂತೆ ಕೆತ್ತನೆಗಳು ಇಂದಿಗು ಪ್ರಸಿದ್ಧವಾಗಿದೆ.

ರಾಷ್ಟ್ರಕೂಟರು - ಮಾನ್ಯಖೇಟ (757 – 973 CE)

ಧ್ರುವ ಮೂರನೇ ಗೋವಿಂದ ಮತ್ತು ಅಮೋಘವರ್ಷ ನೃಪತುಂಗ. ಅಮೋಘವರ್ಷನು ಅತಿಮುಖ್ಯ ರಾಜರಾಗಿ ರಾಜ್ಯಭಾರ ನಡೆಸಿದರು. ಆಗ್ಗೆ ಕನ್ನಡ ಭಾಷೆಯಲ್ಲಿ ಆಡಲಿತ ನಡೆಯುತ್ತಿತ್ತು. ಮೊಡಲ ಬಾರಿದೆ ಸಾಹಿತ್ಯದ ಮೆಟ್ಟಲು ಹತ್ತಿಸಿದರು ರಾಷ್ಟ್ರಕೂಟರು. ಕವಿರಾಜಮಾರ್ಗ' ಎಂಬ ಹಳೆಯ ಕನ್ನಡ ಗ್ರಂಥ ರಚನೆಯನ್ನು ಕನ್ನಡಗರಿಗೆ ನಿಧಿಯಂತೆ ನೀಡಿದರು. ಶ್ರೇಷ್ಠವಾದ ಸಾಹಿತ್ಯದೊಂದಿಗೆ ಗುಹೆಗಳ ಕೆತ್ತನೆಗಳು ಉನ್ನತ ಪ್ರಮಾಣದಲ್ಲಿ ಮಾಡಿದರು. ಉತ್ತರ ಭಾರತದ ಎಲ್ಲೋರಾ ಕೆತ್ತನೆಗಳು ರಾಷ್ಟ್ರಕೂಟರ ಕೊಡುಗೆಯಾಗಿದೆ.

ನಂತರ ಆಳಿದ ಹೊಯ್ಸಳರು ಕಲ್ಯಾಣ ಚಾಲುಕ್ಯರ ಕಾಲ 973–1198 ಕ್ರೀ.ಶ. ಕಲೆಯ ಸೌಂದರ್ಯವನ್ನೇ ಹೆಚ್ಚಿಸುವ ಬೇಲೂರು ಹಳೇಬೀಡು ದೇವಸ್ಥಾನಗಳ ಅಪೂರ್ವ ಕಟ್ಟಡಗಳ ನಿರ್ಮಿಸಿದರು. ಆಪರಿಯ ಚಂದವನ್ನು ವರ್ಣಿಸಲು ಅಸಾಧ್ಯ ಹೊಯ್ಸಳರ ಕಾಲದಲ್ಲಿ ಉಗಮವಾದದ್ದು ಬಸವನ ವಚನಗಳು ಶರಣರ ವಚನಗಳು. ಸಾಹಿತ್ಯದ ಕಲ್ಯಾಣಕಾಲವೆಂಬಂತೆ ಸಾಮಾನ್ಯ ಜನರವರೆಗು ತಲುಪಿದವು.

ಸೂರ್ಯನ ಕಾಂತಿಯಂತೆ ಬೆಳಗಿದ ವಿಜಯನಗರ ಸಾಮ್ರಾಜ್ಯ1336–1565 ಕ್ರೀ.ಶ. ವರೆಗು ಪ್ರಕಾಶಗೊಂಡಿತು. ಹರಿಹರ,ಬುಕ್ಕರಾಯರಿಂದ ಕಟ್ಟಲುಪಟ್ಟ ವಿಜಯನಗರವನ್ನು ಶ್ರೀ ಕೃಷ್ಣದೇವರಾಯರು ಚಕ್ರವರ್ತಿಯಾಗಿ ಬರವಿಲ್ಲದ ರಾಮರಾಜ್ಯವನ್ನೇ ಪುನಃ ತಂದಂತಾಯಿತು. ಜನರಲ್ಲಿ ಎಂತಹ ಕೊರತೆಯು ಇಲ್ಲದಹಾಂಗೆ ವ್ಯಾಪಾರ, ಕಲೆ, ಸಂಗೀತ, ಸಾಹಿತ್ಯ ತದಿತರ ಎಲ್ಲಾ ವಿಷಯಗಳಲ್ಲು ಶ್ರೇಷ್ಠವಾಗಿತ್ತು. ಇತಿಹಾಸವ ಅರಿತ ಭಾಗ್ಯವಂತರು ಅಂತಹಕಾಲ ಮತ್ತೊಮ್ಮೆ ಬರಬಾರದೇಯಂದು ಒಮ್ಮೆಯಾದರು ಅಂದುಕೊಳ್ಳುವರು.

ಅದರ ಬಳಿಕ ಒಡೆಯರು ಮತ್ತು ಆಧುನಿಕ ಕರ್ನಾಟಕ 1399–1950 ಕಾಲದ ವರೆಗು ನಡೆದಿತು. ಮೈಸೂರನ್ನು ನಿರ್ಮಿಸಿದವರು ಸರ್. ಎಂ. ವಿಶ್ವೇಶ್ವರಯ್ಯ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ರವರು. 1956 ನಲ್ಲಿ ಮೈಸೂರ್ ರಾಜ್ಯವೆಂದು ಚಲಾಮಣಿಯಾಯಿತು ಆನಂತರ 1973 ಯಲ್ಲಿ ಕರ್ನಾಟಕವೆಂಬ ನಾಮದಿಂದ ಕನ್ನಡರಾಜ್ಯದ ಸಂಸ್ಕೃತಿ ಸುಗಮವಾಗಿ ನಡೆಯುತ್ತಿದೆ.

ಸ್ವಾತಂತ್ರ್ಯದಮುನ್ನ ಕನ್ನಡ ಕಾಜ್ಯವನ್ನು ಮೈಸೂರು ರಾಜ್ಯವೆಂದು ಕರೆಯಲಾಗುತ್ತಿತ್ತು. ಕನ್ನಡ ಮಾತಾಡುವ ಜನರು ಬಾಂಬೇ, ಹೈದರಾಬಾದು, ಮತ್ತಿತರ ಪ್ರದೇಶಗಳಲ್ಲಿ ಹರಡಿದ್ದರು. ಏಕೀಕರಣದಿಂದ ಆಡಳಿತ ಒಂದೇಕಡೆ ತರಲಾಗಿತು. ಗಣರಾಜ್ಯವಾದ ನಂತರ 1950 ನಲ್ಲಿ ಕರ್ನಾಟಕವೆಂದು ದೇವರಾಜ್ ಅರಸ್ ಅವರು ಪುನಃ ನಾಮಕರಣ ಮಾಡಲಾಯಿತು. ಅಂದಿನಿಂದ ಇಂದಿನ ವರೆಗೆ ಮುಖ್ಯಮಂತ್ರಿಗಳ ಆಡಳಿತದಲ್ಲಿ ರಾಜ್ಯದ ಕಾರ್ಯಾಚರಣೆ ನಡೆಯುತ್ತಾ ಬರುತ್ತಿದೇ.

ಕರ್ನಾಟಕದ ಇತಿಹಾಸ ಹಾಗು ಚಾರಿತ್ರಿಕ ಪರಂಪರೆ

ಕರೇ ಮಣ್ಣು ಹೊಂದಿರುವ ಪ್ರದೇಶ ಹಾಗು ಕರು ಎಂದರೇ ಎತ್ತರದ ಪ್ರದೇಶ ಅಂತಲು ಅರ್ಥ ಹೊಂದಿದೆ ಆದ್ದರಿಂದ ಕರುನಾಡೆಂದು ನಮ್ಮ ನಾಡು ಪ್ರಚಾರಗೊಂಡಿದೆ. ಮಹಾಭಾರತದ ಕಾಲದಿಂದಲೂ ಕರುನಾಡು ಕನ್ನಾಡು ಆಗಿ ಇತ್ತು ಸಂಸ್ಕೃತೀಕರಣದಿಂದ ಕರ್ನಾಟಕ ಹೆಸರು ಬಂದಿತೆಂದು ದಾಖಲುಗಳು ಕಂಡು ಬರುತ್ತದೆ. ಗಂಡಭೇರುಂಡ ನಾಡಿನ ಚಿಹ್ನೆಯಾಗಿ ಆಯ್ದುಕೊಳ್ಳಲಾಯಿತು. ಪುರಾಣದಕಾಲದಲ್ಲಿ ಗಂಡಭೇರುಂಡಯಂದರೇ ಎರಡುತಲೆಗಳ ಪೌರಾಣಿಕ ಪಕ್ಷಿ. ಅತಿಬಲ ಹೊಂದಿರುವ ಪಕ್ಷಿಯಂದು ನಂಬಲಾಗಿದೇ. ವಿಷ್ಣುವಿನ ನರಸಿಂಹ ಅವತಾರದ ಮುಂದಿನ ರೂಪವೆಂದು ಜನರ ವಿಶ್ವಸ. ವಿಜಯನಗರಕಾಲದಲ್ಲಿ ಹಾಗೂ ಮೈಸೂರು ಒಡೆಯರು ಗಂಡಭೇರುಂಡವನ್ನು ರಾಜ್ಯ ಲಾಂಛನದ ರೂಪದಲ್ಲಿ ಬಳಸಿರುವರು. ಗಂಡಭೇರುಂಡ ವಿರುದ್ಧಮುಖ ಉಳ್ಳ ಪಕ್ಷಿ ಎಲ್ಲಾ ದಿಕ್ಕುಗಳನ್ನು ಕಾಯುತ್ತದೆಂದು ಶಕ್ತಿ ಮತ್ತು ರಕ್ಷಣೆಗಳ ಸಂಕೇತವೆಂದು ಬುದ್ಧಿ ಹೃದಯ ಬೇರೇ ಅಂಗಗಳಾದರೂ ಏಕ್ಯತೆಯಿಂದ ಇಟ್ಟುಕೊಳ್ಳಬೇಕೆಂದು ಸೂಚಿಸುತ್ತದೆಂದು ಮಹತ್ವವನ್ನು ವರ್ಣಸಲಾಗುತ್ತದೆ. ಅಂತಹ ಶಕ್ತಿವಂತ ಪಕ್ಷಿ ನಮ್ಮ ಕರ್ನಾಟಕದ ರಾಜ್ಯ ಲಾಂಛನವಾಗಿರುವುದು ನಮ್ಮೆಲ್ಲರ ಹೆಮ್ಮೆಯ ವಿಷಯವಾಗಿದೆ.

ಬೃಹತ್ ಇತಿಹಾಸವುಳ್ಳ ಕರುನಾಡಿನ ಮಡಿಲಿನ ಮಕ್ಕಳು ನಾವೆಂದು ಅತಿ ಗರ್ವದಿಂದ ಹೇಳಿಕೊಳ್ಳೋಣ. ಕನ್ನಡ ಭಾಷೆಯ ರಕ್ಷಣೆ ಮಾಡೋಣ. ನಾಡಿನ ಕವಿತಾ ಆಣಿಮುತ್ತುಗಳನ್ನು ಸಂಗ್ರಹಿಸೋಣ ನಾಡಿನ ಮಣ್ಣಿನ ಗಂಧವನ್ನು ಮುಂದಿನ ಪೀಳಿಗೆಗಳಿಗೆ ಧಾರೆಯೆರಿಯೋಣ. ಭಾಷೆಯೇ ಸಂಸ್ಕೃತಿಯ ಸ್ತಂಭವು ಅದನ್ನು ಎತ್ತಿ ನಿಲ್ಲಿಸುವ ಸಾಮರ್ಥ್ಯ ಪ್ರತಿಯೊಬ್ಬ ಕನ್ನಡಿಗರ ಮನೆಮನಗಳಲ್ಲು ತುಂಬಿರಲೆಂದು ಆಶಿಸುತ್ತಾ ನಮ್ಮ ಕರ್ನಾಟಕದ ಇತಿಹಾಸ ಲಘುಮಾತ್ರದಲ್ಲಿ ತಿಳಿಸುವ ಪ್ರಯತ್ನವನ್ನು ಆದರಿಸಿರೆಂದು ವಿಜ್ಞಾಪಿಸುತ್ತೇನೆ.

ಜೈ ಭವಾನಿ 🙏
ಜೈ ಕರ್ನಾಟಕ 🙏
ಜೈ ಭಾರತ 🙏

CKS Gratifications — a small token of love!

The CKS team sincerely thanks all members and volunteers for their selfless service, which continues to support the community's success and uphold its excellent vision. Join hands to think big, make big, and achieve big. Unity is the power that empowers the community for a better future.



ಮಕ್ಕಳ ಚಿತ್ರಕಲೆಗಳು



ಅದ್ವಿತ್ ಹೊಳ್ಳ



Aarav Madaiah



Arnav Madaiah

ಮಕ್ಕಳ ಚಿತ್ರಕಲೆಗಳು



Pruthvik Byregowda



Our Proud Sponsors

HEARTFELT GRATITUDE TO OUR SPONSORS

Your support helps us bring our community together and keep our traditions alive.

GOLD SPONSER







SILVER SPONSER







HONORARY SPONSER

- Royal Spices
- Shruti Arjun
- Banu Sunil
- Seema Khot
- Madhu B
- Sunil K
- Rahul Biraj



ಧನ್ಯವಾದಗಳು





Roopa Rani Bussa
Cultural Committee
Composer and editor

Irappa Bisanakoppa
Web & Media Committee
Newsletter Designer